ಗೆದ್ದರಾದರೂ ವಿಶ್ವದ ಬ್ಯಾಡ್ಮಿಂಟನ್ ಕೋಟೆಯಲ್ಲಿ ಭಾರತದ ಛಾಪು ಮೂಡಿಸುವಷ್ಟು ಪರಿಣಾಮಕಾರಿಯಾಗಲಿಲ್ಲ.

2010ರ ಬಳಿಕ ಭಾರತದಲ್ಲಿ ಬ್ಯಾಡ್ಮಿಂಟನ್ ಹೊಸ ಮೈಲುಗಲ್ಲು ಸ್ಥಾಪಿಸಲು ಆರಂಭಿಸಿತು. ವಿಶ್ವ ಬ್ಯಾಡ್ಮಿಂಟನ್‌ನ ಶಕ್ತಿ ಕೇಂದ್ರಗಳು ಎನಿಸಿದ್ದ ಚೀನಾ, ಜಪಾನ್, ಕೊರಿಯಾ, ಇಂಡೊನೇಷ್ಯಾ, ಮಲೇಷ್ಯಾ, ಡೆನ್ಮಾರ್ಕ್ ರಾಷ್ಟ್ರಗಳ ಭದ್ರ ಕೋಟೆಯನ್ನು ಭೇದಿಸಿ ಭಾರತ ಅಧಿಪತ್ಯ ಸ್ಥಾಪಿಸಿತು. 2010ರಲ್ಲಿ ಸೈನಾ




ನೆಹ್ವಾಲ್ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಗೆಲ್ಲುವ ಮೂಲಕ ಮಹಿಳಾ ಸಿಂಗಲ್ಸ್ ವಿಭಾಗದ ರ‍್ಯಾಂಕಿಂಗ್‌ನಲ್ಲಿ ಅಗ್ರಪಟ್ಟ ಸಂಪಾದಿಸಿದರು. ಈ ಸಾಧನೆ ಮಾಡಿದ ಭಾರತದ ಮೊದಲ ಆಟಗಾರ್ತಿ ಎನ್ನುವ ಕೀರ್ತಿಯನ್ನೂ ಪಡೆದರು. 2018ರಲ್ಲಿಯೂ ಕಾಮನ್‌ವೆಲ್ತ್‌ನಲ್ಲಿ ಪದಕ ಜಯಿಸಿ ಈ ಕ್ರೀಡಾಕೂಟದಲ್ಲಿ ಎರಡು ಚಿನ್ನ ಗೆದ್ದ ದೇಶದ ಮೊದಲ ಆಟಗಾರ್ತಿ ಎನಿಸಿದರು. 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಸೈನಾ ನೆಹ್ವಾಲ್ ಕಂಚು ಪಡೆದ ಬಳಿಕ ಭಾರತ ಬ್ಯಾಡ್ಮಿಂಟನ್‌ನಲ್ಲಿ ಹೊಸ ಶಕ್ತಿಯಾಗಿ ಉದಯಿಸಿತು.

ಸೈನಾ ನೆಹ್ವಾಲ್‌ಗೆ ಸರಿಸಮನಾಗಿಯೇ ಸಾಮರ್ಥ್ಯ ತೋರಿದ ಪಿ.ವಿ. ಸಿಂಧು 2013ರಲ್ಲಿ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಪದಕ ಗೆದ್ದರು. ಒಲಿಂಪಿಕ್ಸ್‌ನಲ್ಲಿ ಒಂದು ಬೆಳ್ಳಿ ಹಾಗೂ ಒಂದು ಕಂಚು, ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಐದು, ಏಷ್ಯನ್ ಗೇಮ್ಸ್, ಏಷ್ಯನ್ ಚಾಂಪಿಯನ್‌ಶಿಪ್ ಹೀಗೆ ಪ್ರತಿ ಟೂರ್ನಿಯಲ್ಲಿಯೂ ಸಿಂಧು ಪದಕಗಳನ್ನು ಗೆದ್ದುಕೊಂಡರು. ಈ ಎಲ್ಲ ಪದಕಗಳು ಬಂದಿದ್ದು ಹಿಂದಿನ ಒಂದೂವರೆ ದಶಕದ ಅವಧಿಯಲ್ಲಿ ಎನ್ನುವುದು ವಿಶೇಷ. ಭಾರತ ಈ ಕ್ರೀಡೆಯ ಸಿಂಗಲ್ಸ್‌ನಲ್ಲಿ ಎಲ್ಲಾ ಟೂರ್ನಿಗಳಲ್ಲಿಯೂ ಪದಕಗಳನ್ನು ಗೆದ್ದುಕೊಂಡಿದೆ. ಆದರೆ, ಡಬಲ್ಸ್ ವಿಭಾಗದಲ್ಲಿ ವಿಶ್ವಮಟ್ಟದಲ್ಲಿ ಗಮನ ಸೆಳೆದಿಲ್ಲ.

1992ರ ಒಲಿಂಪಿಕ್ಸ್‌ನ ಪುರುಷರ ಡಬಲ್ಸ್‌ನಲ್ಲಿ ದೇಶವನ್ನು ಪ್ರತಿನಿಧಿಸಿದ್ದ ಯು. ವಿಮಲ್ ಕುಮಾರ್– ದೀಪಾಂಕರ್ ಭಟ್ಟಾಚಾರ್ಯ ಮೊದಲ ಸುತ್ತಿನಲ್ಲಿ, 2012ರ ಒಲಿಂಪಿಕ್ಸ್‌ನ ಮಹಿಳಾ ವಿಭಾಗದಲ್ಲಿ ಜ್ವಾಲಾ ಗುಟ್ಟಾ–ಅಶ್ವಿನಿ ಪೊನ್ನಪ್ಪ ಗುಂಪು ಹಂತ, 2016ರಲ್ಲಿ ಇದೇ ಜೋಡಿ ಮತ್ತು ಪುರುಷರ ವಿಭಾಗದಲ್ಲಿ ಮನು ಅತ್ರಿ–ಬಿ. ಸಮೀತ್ ರೆಡ್ಡಿ ಗುಂಪು ಹಂತದಲ್ಲಿ ನಿರ್ಗಮಿಸಿತ್ತು. ಜ್ವಾಲಾ ಮತ್ತು ಅಶ್ವಿನಿ ಜೋಡಿ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಪದಕಗಳನ್ನು ಗೆದ್ದುಕೊಂಡಿದೆ.

ಆದರೆ, ಪುರುಷರ ಡಬಲ್ಸ್ ವಿಭಾಗದಲ್ಲಿ ಜಗತ್ತು ಭಾರತದ ಬ್ಯಾಡ್ಮಿಂಟನ್ ಶಕ್ತಿಯನ್ನು ಹೊರಳಿ ನೋಡುವ ಹಾಗೆ ಸಾತ್ವಿಕ್ ಮತ್ತು ಚಿರಾಗ್ ಶೆಟ್ಟಿ ಮಾಡುತ್ತಿದ್ದಾರೆ.

25 ವರ್ಷದ ಮುಂಬೈ ಮೂಲದ ಚಿರಾಗ್ ಶೆಟ್ಟಿ ತಂದೆ ಚಂದ್ರಶೇಖರ್ ಶೆಟ್ಟಿ ಹೋಟೆಲ್ ಉದ್ಯಮಿ. ತಾಯಿ ಸುಜಾತಾ ಶೆಟ್ಟಿ ಸ್ಪೋರ್ಟ್ಸ್ ಕ್ಲಬ್ ನಿರ್ವಹಣೆ ಮಾಡುತ್ತಿದ್ದಾರೆ. ಕ್ರೀಡಾ ಕುಟುಂಬದ ಹಿನ್ನೆಲೆಯಲ್ಲಿ ಬಂದಿರುವ ಚಿರಾಗ್ ಸಹೋದರಿ ಆರ್ಯ ಶೆಟ್ಟಿ ಕೂಡ ವೃತ್ತಿಪರ ಬ್ಯಾಡ್ಮಿಂಟನ್ ಆಟಗಾರ್ತಿ. ಏಳು ವರ್ಷದವರಿದ್ದಾಗಲೇ ಈ ಕ್ರೀಡೆಯತ್ತ ಆಸಕ್ತಿ ತೋರಿ ವೃತ್ತಿಪರ ತರಬೇತಿ ಪಡೆದ ಚಿರಾಗ್ ಮಿಶ್ರ ಮತ್ತು ಡಬಲ್ಸ್ ವಿಭಾಗದಲ್ಲಿ ಹೆಸರು ಮಾಡುತ್ತಿದ್ದಾರೆ. ಜೂನಿಯರ್ ಹಂತದಲ್ಲಿ ಚಿರಾಗ್ ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ ಆಯೋಜಿಸುವ ಟೂರ್ನಿಗಳಲ್ಲಿ ಮೂರು ಸಲ ಚಾಂಪಿಯನ್ಸ್ ಮತ್ತು ರನ್ನರ್ಸ್ ಅಪ್ ಆಗಿದ್ದಾರೆ.

ಸಾತ್ವಿಕ್ ಆಂಧ್ರದ ಪಶ್ಚಿಮ ಗೋದಾವರಿ ಜಿಲ್ಲೆಯ ಅಮಲಾಪುರಂನವರು. ತಮ್ಮ ಎಂಟನೇ ವಯಸ್ಸಿನಲ್ಲಿ ಪುಲ್ಲೇಲ ಗೋಪಿಚಂದ್ ಅಕಾಡೆಮಿ ಸೇರಿಕೊಂಡರು. ಸಾತ್ವಿಕ್ ತಂದೆ ಕಾಶಿ ವಿಶ್ವನಾಥ ರಾಜ್ಯಮಟ್ಟದ ಬ್ಯಾಡ್ಮಿಂಟನ್ ಆಟಗಾರರಾಗಿದ್ದರು. ವೃತ್ತಿಯಿಂದ ದೈಹಿಕ ಶಿಕ್ಷಣ ಶಿಕ್ಷಕರಾಗಿ ನಿವೃತ್ತರಾಗಿದ್ದಾರೆ.

ಈ ಜೋಡಿ ಒಂದಾಗಿ ಪುರುಷರ ಡಬಲ್ಸ್ ವಿಭಾಗದಲ್ಲಿ ಸಾಧನೆಯ ಹೊಸ ಭರವಸೆಗಳನ್ನು ಮೂಡಿಸುತ್ತಿದೆ. 2018ರ ಕಾಮನ್‌ವೆಲ್ತ್ ಕ್ರೀಡಾಕೂಟದ ಮಿಶ್ರ ತಂಡ ವಿಭಾಗದಲ್ಲಿ ಐತಿಹಾಸಿಕ ಚಿನ್ನದ ಪದಕ ಗೆದ್ದುಕೊಂಡಿತ್ತು. ಇದೇ ಟೂರ್ನಿಯ ಡಬಲ್ಸ್ ವಿಭಾಗದಲ್ಲಿ ಹಾಗೂ 2022ರ ಟೂರ್ನಿಯಲ್ಲಿ ಪದಕಗಳನ್ನು ಗೆದ್ದುಕೊಂಡರು. ಸಾತ್ವಿಕ್ ಇದೇ ವರ್ಷ ದುಬೈನಲ್ಲಿ ಏಷ್ಯನ್ ಚಾಂಪಿಯನ್‌ಶಿಪ್‌ನ ಡಬಲ್ಸ್‌ನಲ್ಲಿ ಚಿನ್ನದ ಪದಕಕ್ಕೆ ಕೊರಳೊಡ್ಡಿದರು. ಏಷ್ಯನ್ ಟೀಮ್ ಚಾಂಪಿಯನ್‌ಶಿಪ್‌ನಲ್ಲಿ ಎರಡು ಸಲ ಪದಕಗಳನ್ನು ಜಯಿಸಿದ್ದಾರೆ. 2019ರಲ್ಲಿ ಬಿಡಬ್ಲ್ಯುಎಫ್ ವಿಶ್ವ ಟೂರ್‌ನಲ್ಲಿ ಥಾಯ್ಲೆಂಡ್ ಆಟಗಾರರ ಎದುರು ಗೆದ್ದರು. ಕಳೆದ ವರ್ಷ ಇಂಡಿಯನ್ ಓಪನ್ ಟೂರ್ನಿಯಲ್ಲಿ ಗೆಲುವು ಸಾಧಿಸಿ, ಥಾಮಸ್ ಕಪ್ ಚಾಂಪಿಯನ್ ಆದರು.

ಜೂನಿಯರ್ ಹಂತದಲ್ಲಿ ಇವರಿಬ್ಬರೂ 2018ರಿಂದ ಡಬಲ್ಸ್ ವಿಭಾಗದಲ್ಲಿ ತೋರಿಸುತ್ತಿರುವ ಸಾಧನೆ ಗಮನ ಸೆಳೆಯುತ್ತಿದೆ. ಕಳೆದ 5 ವರ್ಷಗಳ ಅವಧಿಯಲ್ಲಿ ಈ ಜೋಡಿ ಹೈದರಾಬಾದ್ ಓಪನ್, ಥಾಯ್ಲೆಂಡ್ ಓಪನ್, ಇಂಡಿಯನ್, ಫ್ರೆಂಚ್, ಸ್ವಿಸ್ ಮತ್ತು ಇಂಡೊನೇಷ್ಯಾ ಓಪನ್ ಟೂರ್ನಿಗಳಲ್ಲಿ ಚಿನ್ನದ ಪದಕಗಳನ್ನು ಗೆದ್ದುಕೊಂಡಿದೆ. ಅಂತರರಾಷ್ಟ್ರೀಯ ಮಟ್ಟದ ಚಾಲೆಂಜ್ ಸರಣಿಗಳಲ್ಲಿ ಡಬಲ್ಸ್ ವಿಭಾಗದಲ್ಲಿ ಇವರು ಆಡಿದ ಎಲ್ಲ ಪ್ರಮುಖ ಆರೂ ಟೂರ್ನಿಗಳಲ್ಲಿ ಚಿನ್ನ ಜಯಿಸಿದ್ದಾರೆ.

ಹೀಗಾಗಿ ಸಾತ್ವಿಕ್ ಮತ್ತು ಚಿರಾಗ್ ಶೆಟ್ಟಿ ಸಾಧನೆ ಈಗ ವಿಶ್ವ ಮಟ್ಟದಲ್ಲಿ ಗಮನ ಸೆಳೆಯುತ್ತಿದೆ. ಭಾರತದ ಮಟ್ಟಿಗೆ ಹೇಳುವುದಾದರೂ ಪುರುಷರ ಡಬಲ್ಸ್ ವಿಭಾಗದಲ್ಲಿ ಜೂನಿಯರ್ ಹಂತದಿಂದ ನಿರಂತರವಾಗಿ ಟೂರ್ನಿಗಳಲ್ಲಿ ಪದಕಗಳ ಫಸಲು ತೆಗೆದು ಸ್ಥಿರ ಪ್ರದರ್ಶನ ನೀಡುತ್ತಿರುವುದು ಇತ್ತೀಚಿಗಿನ ವರ್ಷಗಳಲ್ಲಿ ಮಾತ್ರ.

ಸಾತ್ವಿಕ್ ಮತ್ತು ಚಿರಾಗ್ ಶೆಟ್ಟಿ ಹಲವು ವರ್ಷಗಳಿಂದ ನಿರಂತರವಾಗಿ ಡಬಲ್ಸ್ ಮತ್ತು ತಂಡ ವಿಭಾಗದಲ್ಲಿ ಭಾರತಕ್ಕೆ ಪದಕಗಳನ್ನು ತಂದುಕೊಡುತ್ತಿರುವುದು ಹೊಸ ನಿರೀಕ್ಷೆಗಳನ್ನು ಹುಟ್ಟುಹಾಕಿದೆ. ಮುಂಬರುವ ವರ್ಷಗಳಲ್ಲಿ ಏಷ್ಯನ್ ಗೇಮ್ಸ್, ಕಾಮನ್‌ವೆಲ್ತ್‌ನಂಥ ಕ್ರೀಡಾಕೂಟಗಳು ಬರಲಿವೆ. ಮುಖ್ಯವಾಗಿ ಒಲಿಂಪಿಕ್ಸ್‌ನಲ್ಲಿ ಸಿಂಗಲ್ಸ್‌ನಲ್ಲಿ ಮೂರು ಪದಕಗಳನ್ನು ಗೆದ್ದಿರುವ ಭಾರತ ಈಗ ಡಬಲ್ಸ್‌ನಲ್ಲಿ ತನ್ನ ಶಕ್ತಿ ತೋರಿಸಿಲ್ಲ. ಈ ನಿಟ್ಟಿನಲ್ಲಿ ಭಲೇ ಜೋಡಿಯ ಕಮಾಲ್ ನಡೆಯಬೇಕಿದೆ.

ಪ್ರತಿಕ್ರಿಯಿಸಿ: feedback@sudha.co.in